# ಟೈರ್ ಚಪ್ಪಲಿಗಳು!

ಮಾರುಕಟ್ಟೆಯಲ್ಲಿ ವಿಧ ವಿಧವಾದ ಚಪ್ಪಲಿಗಳು ದೊರಕುತ್ತಿವೆ. ಇವುಗಳ ಮಧ್ಯೆ ರಾಯಚೂರಿನಲ್ಲಿ ಲಾರಿ, ಬಸ್ ಟೈರ್‌ನಿಂದ ಮಾಡಿದ ಚಪ್ಪಲಿಗಳು ವಿಭಿನ್ನವಾಗಿ ನಿಂತಿವೆ. ಕುರಿ ಕಾಯುವ ಜನರು, ಕಾಡಿಗೆ ಕಟ್ಟಿಗೆ ಕಡಿಯಲು ಹೋಗುವ ಮಂದಿ ಈ ಟೈರ್ ಚಪ್ಪಲಿಗಳನ್ನು ಬಳಸುತ್ತಾರೆ. ಕಲ್ಲಿರಲಿ, ಮುಳ್ಳಿರಲಿ, ಅದು ಎಂತಹುದೇ ದಾರಿ ಇರಲಿ ಈ ಚಪ್ಪಲಿಗಳು ಜಗ್ಗುವುದಿಲ್ಲ. 100– 120 ರೂಪಾಯಿಗೆ ದೊರಕುವ ಈ ಚಪ್ಪಲಿಗಳು ಸುದೀರ್ಘ ಬಾಳಿಕೆ ಬರುತ್ತವೆ. ಅಲ್ಲದೇ ಕಾಲಿಗೆ ರಕ್ಷಣೆಯನ್ನು ನೀಡುತ್ತವೆ. ರಾಯಚೂರಿನ ಚಂದ್ರಮೌಳೇಶ್ವರ ದೇವಾಲಯದ ಎದುರುಗಡೆ, ರಸ್ತೆ ಬದಿಯಲ್ಲಿರುವ ಪಾದರಕ್ಷೆ ತಯಾರಕರು ಹಳೆಯ ಟೈರ್‌ಗಳನ್ನು ತಂದು ಅವುಗಳನ್ನು ಕತ್ತರಿಸಿ, ತಾವೇ ಚಪ್ಪಲಿಗಳನ್ನಾಗಿ ಮಾಡಿ ಮಾರುತ್ತಾರೆ.

**■ ಈರಣ್ಣ ಬೆಂಗಾಲಿ, ರಾಯಚೂರು**





# ಕಲಾತ್ಮಕ ಕಲ್ಲಿನ ಕುಂಡಲಿ

ಬಾದಾಮಿ ಸನಿಹದ ಶಿವಯೋಗ ಮಂದಿರದಲ್ಲಿ ಹಾನಗಲ್ಲ ಕುಮಾರಸ್ವಾಮಿಗಳ ಗದ್ದುಗೆಯಿದೆ. ಇದರ ಎದುರುಗಡೆ ಭಕ್ತರು ಹಣೆಗೆ ಹಚ್ಚಿಕೊಳ್ಳಲು ಅಂಗಾರವನ್ನು ಹಾಕಿದ ಕಲಾತ್ಮಕ ಕಲ್ಲಿನ ಕುಂಡಲಿ ಎಲ್ಲರ ಗಮನ ಸೆಳೆಯುತ್ತದೆ. ಒಂಟಿ ಕಲ್ಲಿನಲ್ಲಿ ಕೆತ್ತಿದ ಈ ಕುಂಡಲಿಯಲ್ಲಿ ಪೂಜೆಯ ನಂತರ ಭಕ್ತರಿಗಾಗಿ ಅಂಗಾರವನ್ನು ಹಾಕಲಾಗುತ್ತದೆ.

**■ ಡಾ.ಮಲ್ಲಿಕಾರ್ಜುನ ಕುಂಬಾರ, ರಾಜೂರ**

# ಜಪಾನಿನ ಫುಶಿಮಿ ಇನಾರಿ

ನಾವು ನಮ್ಮ ಜಪಾನ್ ಪ್ರವಾಸದಲ್ಲಿ ದೇವನಗರಿ ಕ್ಯೋಟೊದ ಈ ಫುಶಿಮಿ ಇನಾರಿಗೆ ಹೋಗಿದ್ದೆವು. ಈ ದೇವಸ್ಥಾನದಲ್ಲಿ ಇನಾರಿ ಎಂಬ ದೇವತೆಯಿದೆ. ಊರಿನ ಯಶಸ್ಸು ಮತ್ತು ಸಮೃದ್ಧಿಗೆ ಈ ದೇವತೆಯಂತೆ. ಇದು ಕ್ಯೋಟೊದ ಒಂದು ಭಾಗವಾದ ಇನಾರಿ ಪರ್ವತದ ಬುಡದಲ್ಲಿ ಇದೆ. ಸಾಲಿನಲ್ಲಿರುವ ರಸ ಸಿಂಧೂರ ವರ್ಣದ ಬಾಗಿಲುಗಳು ಇದರ ವಿಶೇಷ. ದೇವರಿಗೆ ಹರಕೆ ಹೊತ್ತುಕೊಂಡು ಅದು ಫಲಿಸಿದರೆ ಈ ಬಾಗಿಲುಗಳನ್ನು ದಾನವಾಗಿ ನೀಡುತ್ತಾರೆ. ಸುಮಾರು 10 ಸಾವಿರಕ್ಕಿಂತ ಹೆಚ್ಚಿನ ಬಾಗಿಲುಗಳು ಇವೆ. ಈ ಬಾಗಿಲುಗಳ ಮಧ್ಯದಲ್ಲಿ ನಡೆದು ದೇವಸ್ಥಾನವನ್ನು ತಲುಪಲು 2 ಗಂಟೆ ಇದರ ಮಧ್ಯದಲ್ಲಿ ನಡೆದುಕೊಂಡು ಹೋಗುವುದು ಒಂದು ವಿಶಿಷ್ಟ ಅನುಭವ.

**■ ಪ್ರಭಾ ಪಿ. ಶಾಸ್ತ್ರಿ, ಶಿವಮೊಗ್ಗ**

